ಅಧ್ಯಕ್ಷರು : ತಾವು ಏನು ಹೇಳಿದ್ದೀರಿ ಅದು ಬೇಡ. ಬಿಎಸಿ ಮೀಟಿಂಗ್‌ನಲ್ಲಿ ಇಟ್ಟು ಇದರ ಬಗ್ಗೆ ಅವರು ಯಾವ ರೀತಿಯ ತೀರ್ಪನ ತೆಗೆದುಕೊಳ್ಳುತ್ತಾರೊ, ತೆಗೆದುಕೊಳ್ಳಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಬಿಎಸಿಗೆ ಏಕೆ ಬರಬೇಕು?

ಅಧ್ಯಕ್ಷರು : ಅದನ್ನು ಅಲ್ಲಿ ಡಿಸ್ಕಸ್ ಮಾಡೋಣ. ನನ್ನ ರೈಟ್ ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ.

Sri, S.M. KRISHNA : He must be called to order.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 28ನೇ ಪಟ್ಟಿಯಲ್ಲಿರುವ 98 ಪ್ರಶ್ನೆಗಳ ಪೈಕಿ 62 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಿದ್ದೇನೆ.

ವೈದ್ಯಕೀಯ ಅರ್ಹತೆ ಇಲ್ಲದ ವೈದ್ಯರು ವೈದ್ಯ ವೃತ್ತಿ ಮಾಡುವುದರ ನಿರ್ಬಂಧ

2872 - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವೈದ್ಯಕೀಯ ಅರ್ಹತೆ ಇಲ್ಲದ ವೈದ್ಯರುಗಳು ವೃತ್ತಿ ಮಾಡುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಡಾ॥ ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಭಾರತೀಯ ವೈದ್ಯ ಪರಿಷತ್ತು ಅಥವಾ ಕರ್ನಾಟಕ ವೈದ್ಯ ಪರಿಷತ್ತು ಕಾಯಿದೆ 1961 ರಡಿಯಲ್ಲಿ ನೋಂದಾಯಿಸದೆ ಎಂ.ಬಿ.ಬಿ.ಎಸ್ ಕನಿಷ್ಠ ವಿದ್ಯಾರ್ಹತೆ ಹೊಂದದೆ ಇರುವ ಯಾವುದೇ ವ್ಯಕ್ತಿ ವೈದ್ಯವೃತ್ತಿಯನ್ನು ನಡೆಸಿದಲ್ಲಿ ಕಾನೂನಿನ ಪ್ರಕಾರ ಶಿಕ್ಷೆಗೆ ಗುರಿಪಡಿಸಲಾಗುವುದು.

ನೋಂದಣಿ ಇಲ್ಲದೆ ವೈದ್ಯ ವೃತ್ತಿ ನಡೆಸುತ್ತಿರುವ ನಕಲಿ ವೈದ್ಯರ ವಿರುದ್ಧ ಕರ್ನಾಟಕ ಆರ್ಯುವೇದ ಮತ್ತು ಯುನಾನಿ ವೈದ್ಯ ವೃತ್ತಿದಾರರ ಅಧಿನಿಯಮ 1961ರ ಸೆಕ್ಷನ್ 34ರ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ. ನಕಲಿ ವೈದ್ಯ ವೃತ್ತಿ ನಡೆಸುತ್ತಿರುವವರ ಹಾಗೂ ವ್ಯಕ್ತಿಗಳು : ಸಂಸ್ಥೆಗಳು ನಕಲಿ ವೈದ್ಯ ಪ್ರಮಾಣ ಪತ್ರಗಳನ್ನು ವಿತರಿಸುವವರ ಮೇಲೆ ದೂರುಗಳು ಬಂದಲ್ಲಿ ಅವರುಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ಸದರಿ ಅಧಿನಿಯಮ ಸೆಕ್ಷನ್ 40 ರಡಿಯಲ್ಲಿ ನೋಂದಣಾಧಿಕಾರಿ, ಕರ್ನಾಟಕ